# ತಹಶೀಲ್ದಾರರು ಬಳ್ಳಾರಿ ರವರ ನ್ಯಾಯಾಲಯದ ನಡವಳಿಗಳು

| ವಾದಿಗಳು: | ಪ್ರತಿವಾದಿಗಳು: |
|---|---|
| ಶ್ರೀಮತಿ ಗೋವಿಂದಮ್ಮ ಗಂಡ ರಾಮಾಂಜಿನಿ | 1)ಹೊನ್ನೂರಸ್ವಾಮಿ ತಂದೆ ಸಣ್ಣ ತಿಪ್ಪಣ್ಣ<br>2)ಸುಂಕಣ್ಣ ತಂದೆ ಹನುಮಂತಪ್ಪ<br>3)ಮಾರೆಮ್ಮ ತಾಯಿ ಕಮಲಮ್ಮ<br>4)ಅಗಸರ ಈರಣ್ಣ ತಾಯಿ ಕಮಲಮ್ಮ |

**ವಿಷಯ:**-ಬಳ್ಳಾರಿ ತಾಲೂಕು ಬಳ್ಳಾರಿ ಹೋಬಳಿಯ ಸಂಜೀವರಾಯನ ಕೋಟೆ ಗ್ರಾಮದ ಸರ್ವೆ ನಂ:69 ವಿಸ್ತೀರ್ಣ:5.48 ಎಕರೆ ಜಮೀನಿಗೆ ಸಂಬಂಧಿಸಿದಂತೆ ವಿಚಾರಣೆ ಕುರಿತು.

******

**ಪ್ರಸ್ತಾವನೆ:**

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಬಳ್ಳಾರಿ ತಾಲೂಕು ಬಳ್ಳಾರಿ ಹೋಬಳಿಯ ಸಂಜೀವರಾಯನ ಕೋಟೆ ಗ್ರಾಮದ ಸರ್ವೆ ನಂ:69 ವಿಸ್ತೀರ್ಣ:5.48 ಎಕರೆ ಜಮೀನಿನ ಹಾಲಿ ಭೂಮಾಲಿಕರಾದ ಶ್ರೀಮತಿ ಹರಿಜನ ಹುಲಿಗೆಮ್ಮ ತಂದೆ ಪರಸಪ್ಪ ಇವರು ಶ್ರೀಮತಿ ಗೋವಿಂದಮ್ಮ ಗಂಡ ರಾಮಾಂಜಿನಿ ಇವರಿಗೆ ಪಾಲು ವಿಭಾಗ ಮಾಡಿಕೊಟ್ಟಿರುತ್ತಾರೆ. ಕಾರಣ ಅರ್ಜಿದಾರರು ಹಕ್ಕು ಬದಲಾವಣೆ ಮಾಡಲು ಮನವಿಯನ್ನು ಸಲ್ಲಿಸಿರುತ್ತಾರೆ. ಅದರಂತೆ ಅರ್ಜಿದಾರರ ಮನವಿಯಂತೆ ಕಂದಾಯ ನೀರಿಕ್ಷಕರು, ಬಳ್ಳಾರಿ ಇವರು ಗ್ರಾಮದಲ್ಲಿ ನಮೂನೆ-21ನ್ನು ಜಾರಿಮಾಡಿರುತ್ತಾರೆ ನಿಗದಿತ ಅವಧಿಯಲ್ಲಿ 1)ಹೊನ್ನೂರಸ್ವಾಮಿ ತಂದೆ ಸಣ್ಣ ತಿಪ್ಪಣ್ಣ 2)ಸುಂಕಣ್ಣ ತಂದೆ ಹನುಮಂತಪ್ಪ 3)ಮಾರೆಮ್ಮ ತಾಯಿ ಕಮಲಮ್ಮ 4)ಅಗಸರ ಈರಣ್ಣ ತಾಯಿ ಕಮಲಮ್ಮ ಇವರಿಂದ ತಕಾರರು ಅರ್ಜಿಯನ್ನು ಸಲ್ಲಿಸಿರುತ್ತಾರೆ. ಸದ್ರಿ ಪಾಲು ವಿಭಾಗ ಕಡತವನ್ನು ಕಂದಾಯ ನಿರೀಕ್ಷಕರು, ಬಳ್ಳಾರಿ ಇವರು ತಿರಸ್ಕರಿಸಿ ಪರಿಶೀಲಿಸಿ ಇತ್ಯರ್ಥ ಪಡೆಸಲು ಈ ಕಾರ್ಯಾಲಯಕ್ಕೆ ಸಲ್ಲಿಸಿರುತ್ತಾರೆ.

ಈ ಪ್ರಕರಣವನ್ನು ಇತ್ಯರ್ಥ ಪಡಿಸಲು ದಿನಾಂಕ:06-06-2011, 12-06-2011, 27-06-2011, 04-07-2011, 11-07-2011, 25-07-2011, 22-08-2011, 10-06-2013, 24-06-2013, 08-07-2013, 19-08-2013, 19-08-2013, 16-09-2013, 21-10-2013, 25-11-2013, 06-01-2013, 05-03-2014, 04-02-2015, 16-02-2015, 22-12-2014, 12-01-2015, 24-01-2015, 31-01-2015, 13-03-2015, 11-01-2016ರಂದು ಪ್ರಕರಣ ಕರೆಯಲಾಗಿ ಡಿ.ಎನ್.ಆರ್/ಎಲ್ ಎನ್.ಡಿ/167/82-83 ದಿನಾಂಕ:04-09-1982ರ ಪ್ರಕಾರ ಶ್ರೀ ಹುಚ್ಚ ರಂಗಪ್ಪ ತಂದೆ ಮಲ್ಲೆಪ್ಪ ಇವರು ಮೂಲ ಪಟ್ಟಾದಾರರಾದ ನಂತರ ತನ್ನ ಸಹೋದರಿಯಾದ ಶ್ರೀಮತಿ ಹ|| ಹುಲಿಗೆಮ್ಮ ತಂದೆ ಪರಸಪ್ಪ ಇವರಿಗೆ ಹಕ್ಕು ಬದಲಾವಣೆ ಮಾಡಿಕೊಟ್ಟಿರುತ್ತಾರೆ ಪಹಣಿ ಕಾಲಂ 12ರಲ್ಲಿ ಇರುವ ಹೆಸರಿನವರಿಗೆ ಯಾವುದೇ ಹಕ್ಕು ಇರುವುದಿಲ್ಲ ಕಾರಣ ಈ ಕೆಳಗಿನಂತೆ ಆದೇಶ.

-::ಆದೇಶ::-

ಸಂ/ಕಂ/ವಿವಾದ/139/2016-17

ದಿನಾಂಕ:6/6/2016

ಪ್ರಸ್ತಾವನೆಯಲ್ಲಿ ವಿವರಿಸಿದಂತೆ ಬಳ್ಳಾರಿ ತಾಲೂಕು ಬಳ್ಳಾರಿ ಹೋಬಳಿಯ ಸಂಜೀವರಾಯನ ಕೋಟೆ ಗ್ರಾಮದ ಸರ್ವೆ ನಂ:69 ವಿಸ್ತೀರ್ಣ:5.48 ಎಕರೆ ಜಮೀನಿನ ಪಹಣಿ 12ರಲ್ಲಿ ಇರುವ (ಸಾಗುವಳಿ ಕಾಲಂ) 1)ಅಗಸರ ಈರಣ್ಣ 2)ವಾಲ್ಮೀಕಿ ಸುಂಕಣ್ಣ 3)ಹ ತಿಪ್ಪಮ್ಮ 4)ಹ.ಮಾರೆಮ್ಮ ಇವರ ಹೆಸರುಗಳನ್ನು ತೆಗೆದುಹಾಕಿ ಶ್ರೀಮತಿ ಗೋವಿಂದಮ್ಮ ಗಂಡ ರಾಮಾಂಜಿನಿ ಇವರ ಹೆಸರಿಗೆ ಪಾಲು ವಿಭಾಗ ಮಾಡಲು ಆದೇಶಿಸಲಾಗಿದೆ.

ಈ ಆದೇಶವು ಇಂದು ದಿನಾಂಕ: 6.6.16 ರಂದು ನ್ಯಾಯಾಲಯದಲ್ಲಿ ಘೋಷಿಸಲಾಯಿತು.

6/6/16

ತಹಶೀಲ್ದಾರರು
ಬಳ್ಳಾರಿ.

ಪ್ರತಿಯನ್ನು:

1.ವಾದಿಗಳು

2.ಶಿರಸ್ತೇದಾರರು ಭೂಮಿ ಗಣಕೀಕರಣ ಕೇಂದ್ರ ಶಾಖೆಗೆ ಸೂಕ್ತ ಕ್ರಮಕ್ಕಾಗಿ.

3.ಆದೇಶದ ಕಡತಕ್ಕೆ

14/06